another service from ₹20 to ₹25.

The hospitals' Arogya Raksha Samitis will decide on how the user fees should be spent, Mr. Rao said.

# 'Kanakadasa and Purandaradasa are 'Ashwini Devatas' of Haridasa literature'

**The Hindu Bureau**
MANGALURU

Calling Purandaradasa and Kanakadasa as "Ashwini Devatas" of Haridasa literature, singer Vidyabhushana said on Thursday that it is impossible to make a distinction between them.

He was speaking after inaugurating the 'Kanaka Kirtana Gangotri' programme organised by the Centre for Research on Kanakadasa of Mangalore University at Mangalagangotri. "They are inseparable. Both were great devotees of the Almighty."

Elaborating on Kanakadasa's philosophy, Mr. Vidyabhushana said: "Kanakadasa's emphasis was on realising God within oneself."

K. Raju Mogaveera, Registrar (administration) of the university, said that Kanakadasa was a poet, singer, and saint. His literature should be studied in the historical context of Vijayanagara's rise and fall.

Mangalore University V-C P.L. Dharma said: "Kanakadasa's thoughts have democratic values. We must understand Kanakadasa without compromising on his ideals and without succumbing to caste politics."

**BENGALURU SOLID WASTE MANAGEMENT LIMITED**
Office of the Deputy General Manager-1 (BSWML)
1st Floor, UNI Building, Thimmaiah Road,

ಪ್ರಜಾವಾಣಿ

## ‘ಕನಕ ಕೀರ್ತನ ಗಂಗೋತ್ರಿ’ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾಭೂಷಣ ಅಭಿಮತ

# ಕನಕ– ಪುರಂದರರ ನಡುವೆ ಭೇದ ಸಲ್ಲದು

ಪ್ರಜಾವಾಣಿ ವಾರ್ತೆ

ಮುಡಿಪು: ‘ಪುರಂದರದಾಸರು ಹಾಗೂ ಕನಕದಾಸರನ್ನು ಬೇರೆ ಮಾಡಲು ಸಾಧ್ಯವಿಲ್ಲ. ಈಗಿನ ಮುಖಂಡರು ಅಥವಾ ಯಾವುದೇ ರಾಜಕೀಯ ಶಕ್ತಿಗಳು ಅವರನ್ನು ದೂರ ಮಾಡಲು ಪ್ರಯತ್ನಿಸಿದರೂ ವಿಭಜನೆಯ ತಂತ್ರ ಫಲಿಸದು’ ಎಂದು ಬೆಂಗಳೂರಿನ ಗಾಯಕ ವಿದ್ಯಾಭೂಷಣ ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ, ಕನಕದಾಸ ಸಂಶೋಧನ ಕೇಂದ್ರವು ಕನಕ ಜಯಂತಿ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ‘ಕನಕ ಕೀರ್ತನ ಗಂಗೋತ್ರಿ’ ಶೈಕ್ಷಣಿಕ ಸಂಸ್ಥೆಗಳ ಹಾಗೂ ಸಾರ್ವಜನಿಕರ ಸಾಮುದಾಯಿಕ ಪಾಲ್ಗೊಳ್ಳುವಿಕೆಯ ಕನಕದಾಸರ ಕೀರ್ತನೆಗಳ ಸಮೂಹ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

**ಮುಖ್ಯಾಂಶಗಳು**

- ‘ಕನಕದಾಸರನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಿ’
- ಕಲಿ, ಕವಿ ಹಾಗೂ ಸಂತರಾಗಿದ್ದ ಕನಕದಾಸರು
- ಕಾರ್ಯಕ್ರಮದಲ್ಲಿ 173 ಗಾಯಕರು ಭಾಗಿ

ಕನಕ– ಪುರಂದರರು ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳು. ಅವರಿಬ್ಬರೂ ಅನ್ಯೋನ್ಯವಾಗಿ ಇದ್ದರು. ಅವರಿಬ್ಬರೂ ಭಗವಂತನ ಪ್ರೀತಿಯ ಭಗವದ್ಭಕ್ತರಾಗಿದ್ದರು. ಭಕ್ತಿ ಚಳವಳಿ ದೇಶದಲ್ಲಿ ಸಂಚಲನೆ ಮೂಡಿಸಿತ್ತು ಎಂದರು.

ಕುಲಸಚಿವ ಕೆ.ರಾಜು ಮೊಗವೀರ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಸಂಗೀತಕ್ಕೆ ವಿಶಿಷ್ಟವಾದ ಸ್ಥಾನವಿದೆ. ಕನಕದಾಸರು ಕಲಿ, ಕವಿ ಹಾಗೂ ಸಂತರೂ ಆಗಿದ್ದಾರೆ ಎಂದರು.



ಕಾರ್ಯಕ್ರಮವನ್ನು ವಿದ್ಯಾಭೂಷಣ ಅವರು ಉದ್ಘಾಟಿಸಿದರು

ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ.ಎಲ್.ಧರ್ಮ, ಕನಕದಾಸರ ಚಿಂತನೆಗಳಲ್ಲಿ ಪ್ರಜಾಪ್ರಭುತ್ವ ಮೌಲ್ಯವಿದೆ. ಮಡಿವಂತಿಕೆಯಿಲ್ಲದೆ ಜಾತಿ ಸಮೀಕರಣದ ರಾಜಕೀಯಕ್ಕೆ ಬಲಿಯಾಗದೆ ಕನಕನನ್ನು ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

ಹಾವೇರಿ ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಪ್ರೊ.ಕೆ.ಚಿನ್ನಪ್ಪ ಗೌಡ, ಹಣಕಾಸು ಅಧಿಕಾರಿ ಪ್ರೊ.ವೈ.ಸಂಗಪ್ಪ, ವಿಶ್ವಮಂಗಳ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಪೂರ್ಣಿಮಾ ಶೆಟ್ಟಿ ಭಾಗವಹಿಸಿದ್ದರು.

ಕನಕದಾಸ ಸಂಶೋಧನಾ ಕೇಂದ್ರದ ಸಂಯೋಜಕ ಧನಂಜಯ ಕುಂಬ್ಳೆ ಸ್ವಾಗತಿಸಿದರು. ಹೇಮ, ಸ್ವಾತಿ ಕನಕದಾಸರ ಕೀರ್ತನೆಯ ಮೂಲಕ ಪ್ರಾರ್ಥಿಸಿದರು. ಅಭಿಜ್ಞಾ ಕಾರ್ಯಕ್ರಮ ನಿರೂಪಿಸಿದರು. ಸಂಧ್ಯಾ ಎನ್. ವಂದಿಸಿದರು.

ಉದ್ಘಾಟನಾ ಸಮಾರಂಭದ ಬಳಿಕ ವಿವಿ ಮಟ್ಟದ ಅಂತರಜಿಲ್ಲಾ ‘ಕನಕ ಕೀರ್ತನ ಗಂಗೋತ್ರಿ’ ಕನಕದಾಸರ ಕೀರ್ತನೆಗಳ ಗಾಯನ ಕಾರ್ಯಕ್ರಮ ಪ್ರೌಢಶಾಲೆ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿ, ಅಧ್ಯಾಪಕ, ಅಧ್ಯಾಪಕೇತರ ಮತ್ತು ಸಾರ್ವಜನಿಕ ಮಟ್ಟದಲ್ಲಿ ನಡೆಯಿತು. ಒಟ್ಟು 173 ಗಾಯಕರು ಭಾಗವಹಿಸಿದ್ದರು.